ಉರಿಯಿತು. ನಾನೂ ಕೂಡಾ ತಾಳ್ಮೆ ಕಳೆದುಕೊಂಡು ಜೋರಾಗಿಯೇ ಮಾತಾಡಿದೆ. ಮಾವನವರ ಮತ್ತು ನನ್ನ ತಂದೆಯವರ ನಡುವೆ ಭಿನ್ನಾಭಿಪ್ರಾಯ ಮೂಡಿತ್ತು. ಇದೂ ಕಾರಣವಾಗಿ ಮಾವನವರು ಕೂಡಾ ನನ್ನ ಮೇಲೆ ತಿರುಗಿಬಿದ್ದರು. ಸಿಟ್ಟು ಪೂರ್ಣ ತಲಾಕ್ ನೀಡುವಲ್ಲಿ ಪರ್ಯವಸಾನಗೊಂಡಿತು.'

'ಸಿಟ್ಟಿನಲ್ಲಿ ತಲಾಕ್ ನಿಷ್ಕ್ರಿಯವಾಗಿರುತ್ತದೆ.'

'ಆಗ ಖಾಜಿಯವರು ಹೀಗಿಯೇ ಹೇಳಿದ್ದಕ್ಕೆ ನಾನು ಆಲೋಚನೆ ಮಾಡಿಯೇ ಕೊಟ್ಟಿದ್ದೇನೆಂತ ಹೇಳಿದ್ದರು. ನನಗೆ ಸ್ವಲ್ಪ ಸಮಯ ಕಸಿವಿಸಿಯಾದರೂ ನಂತರ ಪಂಜರದಿಂದ ಬಿಡುಗಡೆಯಾದ ಪಕ್ಷಿಯಂತೆ ಮನಸ್ಸಿಗೆ ಸಮಾಧಾನವಾಯಿತು. ಈ ಮನೆಗೆ ಪುನಃ ಬಂದಾಗ 130 ದಿನಗಳ 'ಇದ್ದತ್' ಹೆಸರಿನಲ್ಲಿ ಕಾರಾಗೃಹವಾಸ. ನಾಲ್ಕು ಗೋಡೆಗಳೊಳಗೆ ಬಂದಿ. ನನಗೆ ದುಃಖ ಎಳ್ಳಷ್ಟೂ ಇಲ್ಲದೆ ಇದ್ದರೂ ಬಲವಂತದ ಮಾಘಸ್ನಾನ. ಈ ದಿನಗಳಲ್ಲಿ ಗಂಡಬಿಟ್ಟ ಹೆಣ್ಣು ತವರಿನಲ್ಲಿ ಅನುಭವಿಸುವ ಮಾನಸಿಕ ಯಾತನೆಯನ್ನು ಅನುಭವಿಸಿದೆ. ಒಟ್ಟಿನಲ್ಲಿ ಹೆಣ್ಣು ಜನ್ಮವನ್ನೇ ದ್ವೇಷಿಸಿದೆ. ಈಗಿನ ವಿಚಿತ್ರ ಸನ್ನಿವೇಶ ನೋಡಿ ಒಂದು ಕಡೆ ನಗೆ ಬರುತ್ತದೆ. ಇನ್ನೊಂದೆಡೆ ದುಃಖವಾಗುತ್ತಿದೆ. ಎರಡೂ ಸೇರಿ ದ್ವೇಷವಾಗಿ ಪರಿವರ್ತನೆ ಹೊಂದಿದೆ. ನಾನು ತವರಿನಲ್ಲಿದ್ದ ವರ್ಷದೊಳಗೆ ಮಾನವರು ತೀರಿಹೋದರು. ಅವರ ಮಗನಿಗೆ ಈಗ ಜ್ಞಾನೋದಯವಾಗಿದೆಯಂತೆ. ಪಶ್ಚಾತ್ತಾಪ ಪಡುತ್ತಿದ್ದಾರಂತೆ. ಅದಕ್ಕಾಗಿ ಈಗ ನನ್ನನ್ನು ಮರು ಮದುವೆ ಆಗುತ್ತಾರಂತೆ. ಅದಕ್ಕೆ ಸರಿಯಾಗಿ ಸಿಕ್ಕಿದವ ನೀನೊಬ್ಬ ಬಕರಾ, ನನ್ನಂತೆಯೇ...'

**'ಋಣ ಸಂದಾಯಕ್ಕಾಗಿ ಅದಕ್ಕಿಂತಲೂ ಮುಖ್ಯವಾದ ಕಾರಣವೊಂದಿದೆ. ನಿಜ ಹೇಳಿದರೆ ನಿನಗೆ ಆಘಾತವಾಗಬಹುದು ತಡೆಯುವ ಶಕ್ತಿ ಉಂಟಾ ನಿನಗೆ?'**

**'ನನಗೆ ಆಘಾತಗಳನ್ನೆಲ್ಲಾ ಸಹಿಸಿ ಅಭ್ಯಾಸವಾಗಿದೆ. ನೋವೆಂಬುದೇ ಇಲ್ಲದ ಜೀವಕ್ಕೆ ತಡೆದುಕೊಳ್ಳುವ ಪ್ರಶ್ನೆಯೇ ಏಳುವುದಿಲ್ಲ. ಏನಿದ್ದರೂ ನೇರವಾಗಿ ಹೇಳಿಬಿಡು' ಎಂದಳು ಸಲ್ಮಾ ಉದಾಸೀನತೆಯಿಂದ.**

ಸಲ್ಮಾ ಸಿಟ್ಟಿನಿಂದ ನಡಗುತ್ತಿದ್ದಳು.

ಅಬ್ದುಲ್ಲಾ ಅವಳನ್ನು ಸಂತೈಸಲೆತ್ನಿಸಿದ.

'ಇದಕ್ಕೆಲ್ಲಾ ನೀನು ಸಿಟ್ಟಿಗೆದ್ದು ಪ್ರಯೋಜನ ಇಲ್ಲ ಸಲ್ಮಾ. ಬಂದದ್ದನ್ನು ಎದುರಿಸಬೇಕು. ಅಂದಿನ ಕಾಲಕ್ಕೆ ಸರಿಯಾಗಿ ಮತ್ತು ಮುಂದಿನ ಜನಾಂಗಕ್ಕಾಗಿ ಧರ್ಮ ಕೆಲವು ಕಟ್ಟುಪಾಡುಗಳನ್ನು ಹಾಕಿದ್ದು, ಬದಲಾಗುತ್ತಿರುವ ಸಾಮಾಜಿಕ ಪರಿಸರದಲ್ಲಿ ಕೊರತೆಗಳು ಎದ್ದುಕಾಣುವುದು ಸಹಜ. ನಿಜ ಹೇಳುವುದಿದ್ದರೆ ಈ ಸಂಪ್ರದಾಯಗಳನ್ನು ನೇರವಾಗಿ ಎದುರಿಸುವ ಎದೆಗಾರಿಕೆ ನಮ್ಮಿಬ್ಬರಲ್ಲೂ ಇಲ್ಲ. ಯಾಕೆಂದರೆ ನಮ್ಮಿಬ್ಬರ ರಕ್ತದಲ್ಲಿಯೂ ಈ ಸಂಪ್ರದಾಯಗಳು ನಮಗೆ ತಿಳಿಯದಂತೆಯೇ ಸೇರಿಹೋಗಿವೆ. ನಾವು ಪ್ರವಾಹದೊಂದಿಗೆ ಕೊಚ್ಚಿಕೊಂಡು ಹೋಗುತ್ತಿದ್ದೇವೆ.'